ನಡುಬಾಡೆ ಇ–ಪತ್ರಿಕೆ

ASDCA No;SCAB13122025/5632149 UDYAM-KR-18-0022072 ಕೊಡಗಿನ ಪ್ರಥಮ ದ್ವಿಭಾಷ ಸಂಜೆ ಇ-ದೈನಿಕ

ಸಂಪುಟ:01 ಸಂಚಿಕೆ:45 ದಿನಾಂಕ: 14/11/26, ಚೆನಿಯಾಚೆ 8951073556 ನಾಳಂಕೆ : ತೊಲ್ಯಾರ್ -29, ಚೆನಿಯಾಚೆ

www.nadubadenews.com ಸಂಪಾದಕ: ಚಾಮೆರ ದಿನೇಶ್‌ಬೆಳ್ಯಪ್ಪ nadubadenews@gmail.com @nadubadenews

ಪುಟ:1

ಹುದಿಕೇರಿ ಸರ್ಕಾರಿ ಆಸ್ಪತ್ರೆ ಮೇಲ್ದರ್ಜೆಗೆ ; ಕಾಮಗಾರಿ ಪರಿಶೀಲಿಸಿದ ಪೊನ್ನಣ್ಣ

@nadubadewarthe; ಹುದಿಕೇರಿ ನ.14: ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾದ ಶ್ರೀ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ ಅವರ ಶಾಸಕರ ವಿಶೇಷ ಪ್ರಯತ್ನದ ಫಲವಾಗಿ ಸರ್ಕಾರದಿಂದ ಮಂಜೂರಾಗಿರುವ 50 ಹಾಸಿಗೆಗಳ ಆಸ್ಪತ್ರೆಯ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುವ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿಯ ಪರಿಶೀಲನೆ ನಡೆಸಿದರು. ಸ್ಥಳದಲ್ಲಿದ್ದ ಇಂಜಿನಿಯರ್‌ಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಂದ ಕಾಮಗಾರಿಯ ಪ್ರಗತಿಯ ಕುರಿತು ಮಾಹಿತಿ ಪಡೆದು, ನಿಗದಿತ ಸಮಯದೊಳಗೆ ಗುಣಮಟ್ಟದ ಕಾಮಗಾರಿ ಪೂರ್ಣಗೊಳಿಸುವಂತೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.

ಈ ಸಂದರ್ಭದಲ್ಲಿ ಪೊನ್ನಂಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಿದೇರಿರ ನವೀನ್, ವಲಯ ಅಧ್ಯಕ್ಷರಾದ ಚಂಗುಲಂಡ ಸೂರಜ್, ಬೂತ್ ಅಧ್ಯಕ್ಷರಾದ ಮಂದಣ್ಣ, ಅಕ್ರಮ-ಸಕ್ರಮ ಸಮಿತಿ ಅಧ್ಯಕ್ಷರಾದ ಅಣ್ಣಳ್ಳಮಾಡ ಅಪ್ಪಣ್ಣ, ಹಿರಿಯ ಕಾಂಗ್ರೆಸ್ ಮುಖಂಡರಾದ ಚೆಕ್ಕೇರ ವಾಸು ಕುಟ್ಟಪ್ಪ ಹಾಗೂ ಸುಧೀರ್, ಪಕ್ಷದ ಮುಖಂಡರಾದ ಅಜ್ಜಿಕುಟ್ಟಿರ ಪಮ್ಮು, ನೂರೇರ ರಮೇಶ್, ಮನೋಹರ್, ಕಿಟ್ಟು, ಕಾವೇರಪ್ಪ, ಲೋಕನಾಥ್, ರಬಿ, ಬಿಪಿನ್, ಹುದಿಕೇರಿ ಯುವ ಕಾಂಗ್ರೆಸ್ ಅಧ್ಯಕ್ಷರಾದ ರೀಕ್ಷಿತ್ ಕಾರ್ಯಪ್ಪ ಸೇರಿದಂತೆ ಪಕ್ಷದ ಪ್ರಮುಖರು ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

ನ.22ನೇ ನಾರಾಚೆ ಅಜ್ಜಿಕುಟ್ಟಿರ ಕಪ್ ಹಾಕಿನಮ್ಮೆರ ಪೆರ್‌ಂಗುರ್‌ತ್ ಬೊಳಿ



ಅಜ್ಜಿಕುಟ್ಟಿರ ಐನ್‌ಮನೆ



ಅಜ್ಜಿಕುಟ್ಟಿರ ಒಕ್ಕ ಕಾರ

@nadubadewarthe; ನ.14:- 27ನೇ ಕಾಲತ್‌ರ ಕೊಡವ ಒಕ್ಕಡೊಕ್ಕ ನಡುಲ್ ನಡ್ಪ ಹಾಕಿ ನಮ್ಮೆರ ಪರಗುರ್‌ತ್ ಬೊಳಿ ಪಡ್ತುವ ಆಯಿಮೆ, ನಾಳಂಕೆ;22.11.2026ನೇ ನಾರಾಚೆರಂದ್ ಒಯ್ಪತ್ 06.00ಗಂಟೆಕ್ ನಡ್ಪ.

ಬೆಂಗಳೂರ್ ಹಕ್ಕಿತಿಮ್ಮನಹಳ್ಳಿಲುಳ್ಳ ಕರ್ನಾಟಕ ರಾಜ್ಯ ಹಾಕಿ ಸಂಘನಡ್ಪ್ ಈ ಆಯಿಮೆಲ್, ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ಅವು ಪೆರ್‌ಂಗುರ್‌ತ್ ಬೊಳಿಪಡ್ತ್‌ನಕ, ಉಪ ಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಅವು ಆಯಿಮೆಕ್ ಮೊಳಿ ಇಡುವ. ಖನಪಟ್ಟ ಬೆಂದುವಳಾಯಿತ್, ಇಂಧನ ಪಿಂಞ ಪ್ರವಾಸೋದ್ಯಮ ಸಚಿವ ಶ್ರೀ ಕೆ.ಜೆ ಜಾರ್ಜ್ , ಕೃಷಿ ಪಿಂಞ ಕೊಡವ್‌ರ ಮೇಲ್ಮಾನಿಕೆ ಮಂತ್ರಿ ಶ್ರೀ ನರೇಂದ್ರಸ್ವಾಮಿ, ಸುಪ್ರಿಂ ಕೋರ್ಟ್‌ರ ನಿ. ನ್ಯಾಯಮೂರ್ತಿ, ಅಜ್ಜಿಕುಟ್ಟಿರ.ಎಸ್ ಬೊಪಣ್ಣ . ಮುಖ್ಯಮಂತ್ರಿರ ರಾಜಕೀಯ ಕಾರ್ಯಕಾರ ಪಿಂಞ ವಿರಾಜಪೇಟೆ ಶಾಸಕ ಅಜ್ಜಿಕುಟ್ಟಿರ ಎಸ್ ಪೊನ್ನಣ್ಣ, ಮೈಸೂರು-ಕೊಡವ್ ಸಂಸದರ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಮಡಿಕೇರಿ ಶಾಸಕ ಡಾ. ಮಂತರ್ ಗೌಡ, ವಿಧಾನ ಪರಿಷತ್ತಿನ ಸದಸ್ಯ ಮಂಡೆಪಂಡ ಸುಜಾ ಕುಶಾಲಪ್ಪ ಕರ್ನಾಟಕ ಕ್ರೀಡಾ ಪ್ರಾಧಿಕಾರತ ಕೂಟ್ ಕೊರವುಕಾರ ಚೆಪ್ಪುಡಿರ ಅರುಣ್ ಮಾಚಯ್ಯ, ಅಜ್ಜಿಕುಟ್ಟೀರ ಹಾಕಿ ನಮ್ಮೆರ ಕೊರವುಕಾರ ನರೇನ್ ಕಾರಿಯಪ್ಪ, ಅಜ್ಜಿಕುಟ್ಟಿರ ಒಕ್ಕ ಕೊರವುಕಾರ ಚಂಗಪ್ಪ (ಸಜ್ಜನ್) ಕೂಡ್‌ನನಕೆ ಖನಪಟ್ಟವು ಕೂಡಿಯಾಡುವ.

ಈ ಫಳಿಗೆಲ್ ಹಾಕಿ ಕೋವುಲ್ ರಾಷ್ಟ್ರ ಅಂತರಾಷ್ಟ್ರೀಯ ಮಟ್ಟತ್ ಕೇಳಿ ನೇಡ್‌ನೈಂಗಳ ತೊಮ್ಮಾನ ಮಾಡುವದುಂಡ್

ರಾಜಾಸೀಟ್‌ಗೆ ಪ್ರವೇಶ ನಿರ್ಬಂಧ

@nadubadewarthe; ಮಡಿಕೇರಿ ನ.14:-ರಸ್ತೆ ಮಡಿಕೇರಿ ಮಂಗೇರಿರ ಮುತ್ತಣ್ಣ ವೃತ್ತದಿಂದ ರಾಜಾಸೀಟು ಉದ್ಯಾನದ ಕಡೆಗೆ ಹೋಗುವ ರಸ್ತೆಯ ಕಾಂಕ್ರೀಟಿಕರಣಕ್ಕಾಗಿ ಉದ್ಯಾನಕ್ಕೆ ಸಾರ್ವಜನಿಕರ, ಪ್ರವಾಸಿಗರ ಪ್ರವೇಶವನ್ನು ನ.16ರಿಂದ ನ.30ರವರೆಗೆ ನಿರ್ಬಂಧಿಸಿ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಆದೇಶ ಹೊರಡಿಸಿದ್ದಾರೆ.

ಹಾಗೆಯೇ ಜಿಲ್ಲಾಧಿಕಾರಿ ಕಚೇರಿಗೆ ತೆರಳುವ ಅಡ್ಡ ರಸ್ತೆಯಿಂದ ಲಿವಾ ಕ್ಲಿನಿಕ್ವರೆಗಿನ ರಸ್ತೆಯಲ್ಲಿ ಎಲ್ಲಾ ರೀತಿಯ ವಾಹನಗಳ ಸಂಚಾರವನ್ನೂ ನ.16ರಿಂದ ಡಿ.15ರವರೆಗೆ ನಿರ್ಬಂಧಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.



ಡಿ.21ರಿಂದ ಗೌಡ ಪ್ರೀಮಿಯರ್ ಲೀಗ್ ಕ್ರಿಕೆಟ್: 8 ಫ್ರಾಂಚೈಸಿಗಳು ಭಾಗಿ... ಸರ್ಕಾರಿ ಅನುದಾನಕ್ಕೆ ಒತ್ತಾಯ



@nadubadewarthe; ಮಡಿಕೇರಿ ನ.14: ಕೊಡಗು ಗೌಡ ಯುವ ವೇದಿಕೆ ವತಿಯಿಂದ 4ನೇ ಆವೃತ್ತಿಯ ಗೌಡ ಪ್ರೀಮಿಯರ್ ಲೀಗ್ (ಜಿಪಿಎಲ್) ಲೆದರ್ ಬಾಲ್ ಟಿ-10 ಕ್ರಿಕೆಟ್ ಪಂದ್ಯಾವಳಿ ಡಿ.21ರಿಂದ 27ರವರೆಗೆ ಮಡಿಕೇರಿಯ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ. ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಒಕ್ಕಲಿಗ ಗೌಡ ಜನಾಂಗದವರಿಗಾಗಿ ಆಯೋಜಿಸಲಾಗುತ್ತಿರುವ ಈ ಪಂದ್ಯಾವಳಿಯಲ್ಲಿ ಒಟ್ಟು 8 ಫ್ರಾಂಚೈಸಿಗಳು ಪಾಲ್ಗೊಳ್ಳಲಿವೆ ಎಂದು ವೇದಿಕೆಯ ಪ್ರಧಾನ ಕಾರ್ಯದರ್ಶಿ ಪುದಿಯನೆರವನ ರಿಷಿತ್ ಮಾದಯ್ಯ ತಿಳಿಸಿದರು.

ಮಡಿಕೇರಿಯಲ್ಲಿ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಹಲವಾರು ವರ್ಷಗಳಿಂದ ಕೊಡಗು ಗೌಡ ಯುವ ವೇದಿಕೆ ಜನಾಂಗದ ಯುವಜನರಿಗೆ ಕ್ರೀಡಾ ಪ್ರೋತ್ಸಾಹ ನೀಡುವ ಉದ್ದೇಶದಿಂದ ವಿವಿಧ ಕ್ರೀಡಾಕೂಟ ಹಾಗೂ ಕಾರ್ಯಕ್ರಮಗಳನ್ನು ಆಯೋಜಿಸಿಕೊಂಡು ಬರುತ್ತಿದೆ. 2023ರಲ್ಲಿ ಮೊದಲ ಬಾರಿಗೆ ಮನರಂಜನಾ ಕ್ರಿಕೆಟ್‌ನಿಂದ ವೃತ್ತಿಪರ ಕ್ರಿಕೆಟ್ ನತ್ತ ಯುವ ಪ್ರತಿಭೆಗಳನ್ನು ಕೊಂಡೊಯ್ಯುವ ಉದ್ದೇಶದಿಂದ ಲೆದರ್ ಬಾಲ್ ಕ್ರಿಕೆಟ್ ಪರಿಚಯಿಸಲಾಯಿತು. ಕಳೆದ ಮೂರು ವರ್ಷಗಳಿಂದ ಪಂದ್ಯಾವಳಿ ಉತ್ತಮ ಪ್ರತಿಕ್ರಿಯೆ ಪಡೆದುಕೊಂಡಿದ್ದು, ಇದೀಗ ಗ್ರಾಮೀಣ ಪ್ರದೇಶಗಳಲ್ಲಿಯೂ ಲೆದರ್ ಬಾಲ್ ಕ್ರಿಕೆಟ್‌ಗೆ ಅಗತ್ಯ ಮೂಲಸೌಕರ್ಯಗಳು ರೂಪುಗೊಳ್ಳುತ್ತಿವೆ ಎಂದರು.

2026ರ ಸೀಸನ್-4ರಲ್ಲಿ ಕಳೆದ ಬಾರಿಯ ದಿ ಎಲೈಟ್, ಜಿ ಕಿಂಗ್ ಸಿದ್ದಲಿಂಗಪುರ, ಕೂರ್ಗ್ ಹಾಕ್ಸ್ ಮಡಿಕೇರಿ, ಪ್ಲಾಂಟರ್ಸ್ ಕ್ಲಬ್ ಬಿಳಿಗೇರಿ, ಕೊಡಗು ಜಿಲ್ಲಾ ಒಕ್ಕಲಿಗರ ಯುವ ವೇದಿಕೆ, ಪುತ್ತೂರಿನ ಯುವ ತಂಡ, ಮರಗೋಡು ಹಾಗೂ ಕುಶಾಲನಗರ ತಂಡಗಳು ಸೇರಿದಂತೆ ಒಟ್ಟು ಎಂಟು ಫ್ರಾಂಚೈಸಿಗಳು ಭಾಗವಹಿಸಲಿವೆ. ನ.27ರಂದು ಮಡಿಕೇರಿಯ ಕೊಡಗು ಗೌಡ ಸಮಾಜದಲ್ಲಿ ಆಟಗಾರರ ಬಿಡ್ಡಿಂಗ್ ಪ್ರಕ್ರಿಯೆ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಪಂದ್ಯಾವಳಿಯ ವಿಜೇತ ತಂಡಕ್ಕೆ ಒಂದು ಲಕ್ಷ ರೂ. ನಗದು ಹಾಗೂ ದ್ವಿತೀಯ ಸ್ಥಾನ ಪಡೆಯುವ ತಂಡಕ್ಕೆ 60 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು. ಇದರೊಂದಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಉಪಮುಖ್ಯಮಂತ್ರಿಯಾಗಿದ್ದ ಸಂದರ್ಭ 2023ರಲ್ಲಿ ಬಿಡುಗಡೆ ಮಾಡಿದ್ದ ಗೌಡ ಸಂಸ್ಕೃತಿ ಮತ್ತು ಬಲಿದಾನದ ಪ್ರತೀಕವಾದ ಆಕರ್ಷಕ ಟ್ರೋಫಿ ಸೇರಿದಂತೆ ಹಲವು ವೈಯಕ್ತಿಕ ಬಹುಮಾನಗಳನ್ನು ನೀಡಲಾಗುವುದು. ಈ ಬಾರಿ ಕಳೆದ ಮೂರು ವರ್ಷಗಳಿಗಿಂತಲೂ ವಿಜೃಂಭಣೆಯಿಂದ ಪಂದ್ಯಾವಳಿಯನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಇದೇ ಸಂದರ್ಭ ಒಕ್ಕಲಿಗ ಗೌಡ ಮಹಿಳೆಯರಿಗಾಗಿ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ ನಡೆಸುವ ಬಗ್ಗೆಯೂ ಚಿಂತನೆ ನಡೆಸಲಾಗಿದೆ ಎಂದರು. ಜಿಪಿಎಲ್ ಮೂಲಕ ಹಲವು ಕ್ರೀಡಾ ಪ್ರತಿಭೆಗಳು ಹೊರಹೊಮ್ಮಿದ್ದು, ಗೌಡ ಜನಾಂಗದ ಪುರುಷ ಹಾಗೂ ಮಹಿಳಾ ಆಟಗಾರರು ರಾಜ್ಯಮಟ್ಟದ ಕ್ರಿಕೆಟ್ ತಂಡಗಳಲ್ಲಿ ಗುರುತಿಸಿಕೊಂಡಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ರಿಷಿತ್ ಮಾದಯ್ಯ ತಿಳಿಸಿದರು.

2026ರ ಮೇ ತಿಂಗಳಿನಲ್ಲಿ ಯಶಸ್ವಿಯಾಗಿ ನಡೆಸಲಾಗಿದ್ದ ಗೌಡ ಕುಟುಂಬವಾರು ಮಿನಿ ಒಲಿಂಪಿಕ್ಸ್ ಕ್ರೀಡಾಕೂಟವನ್ನು 2027ರಲ್ಲಿ ಏಪ್ರಿಲ್ 16ರಿಂದ ಮೇ 2ರವರೆಗೆ ನಡೆಸಲು ನಿರ್ಧರಿಸಲಾಗಿದೆ. ಈ ಬಾರಿಯೂ ರಿಂಕ್ ಹಾಕಿ ಸ್ಪರ್ಧೆ ಇರಲಿದೆ ಎಂದರು.

ಕೊಡಗು ಗೌಡ ಯುವ ವೇದಿಕೆ ಕಳೆದ 25 ವರ್ಷಗಳಿಂದ ಗೌಡ ಜನಾಂಗದ ಕ್ರೀಡಾಕೂಟಗಳನ್ನು ಆಯೋಜಿಸಿಕೊಂಡು ಬರುತ್ತಿದೆ. ಕಳೆದ ನಾಲ್ಕು ವರ್ಷಗಳಿಂದ ಸರಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗಿಲ್ಲ. ಈ ಬಾರಿಯಾದರೂ ಸರಕಾರ ಜನಾಂಗದ ಕ್ರೀಡೆ ಹಾಗೂ ಸಂಸ್ಕೃತಿಯ ಅಭಿವೃದ್ಧಿಗೆ ಸಹಕರಿಸಬೇಕು. ಮಡಿಕೇರಿ ಮತ್ತು ವಿರಾಜಪೇಟೆ ಕ್ಷೇತ್ರದ ಶಾಸಕರು ಈ ಬಗ್ಗೆ ಆಸಕ್ತಿ ವಹಿಸಿ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಪ್ರತಿವರ್ಷ ಶಾಸಕರಿಂದ ಅನುದಾನದ ಭರವಸೆ ದೊರೆಯುತ್ತಿದೆಯೇ ಹೊರತು ಅನುದಾನ ಬಿಡುಗಡೆಯಾಗುತ್ತಿಲ್ಲ. ಈ ಬಾರಿಯೂ ಅನುದಾನದ ನಿರೀಕ್ಷೆಯಲ್ಲಿದ್ದೇವೆ. ಅನುದಾನ ನೀಡದಿದ್ದಲ್ಲಿ ಗೌಡ ಜನಾಂಗದ ಕ್ರೀಡೆ ಮತ್ತು ಸಂಸ್ಕೃತಿಯ ಅಭಿವೃದ್ಧಿಗಾಗಿ ಹೋರಾಟದ ಹಾದಿ ಹಿಡಿಯಲು ನಿರ್ಧರಿಸಿದ್ದೇವೆ ಎಂದು ಎಚ್ಚರಿಕೆ ನೀಡಿದರು.

ಜಿಪಿಎಲ್ ಗೌಡ ಪ್ರೀಮಿಯರ್ ಲೀಗ್ ಲೆದರ್ ಬಾಲ್ ಟಿ-10 ಕ್ರಿಕೆಟ್ ಪಂದ್ಯಾವಳಿಗೆ ಆಟಗಾರರ ನೋಂದಣಿ ಪ್ರಕ್ರಿಯೆ ಆಫ್‌ಲೈನ್ ಮತ್ತು ಆನ್‌ಲೈನ್ ಮೂಲಕ ಆರಂಭಗೊಂಡಿದ್ದು, ನವೆಂಬರ್ 25 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ 8105160547, 9972376151, 9663253025 ಹಾಗೂ 7019671130 ಸಂಪರ್ಕಿಸಬಹುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಯುವ ವೇದಿಕೆ ಅಧ್ಯಕ್ಷ ಬಾಳಾಡಿ ಮನೋಜ್, ಉಪಾಧ್ಯಕ್ಷ ಪರಿಚನ ಸತೀಶ್, ಕಾರ್ಯದರ್ಶಿ ಕೆದಂಬಾಡಿ ಕಾಂಚನ ಗೌಡ, ಕೋಶಾಧಿಕಾರಿ ನವೀನ್ ದೇರಳ ಹಾಗೂ ಕ್ರೀಡಾಧ್ಯಕ್ಷ ಕುಟ್ಟನ ಪ್ರಶಾಂತ್ ಉಪಸ್ಥಿತರಿದ್ದರು.

ಯಶಸ್ವಿಯಾಗಿ ನಡೆದ ಬಲ್ಲಮಾವಟಿ ಪ್ರಜಾಸೇವಾ ಅಭಿಯಾನ ಸೌಲಭ್ಯ ಕಲ್ಪಿಸುವುದು ಜವಾಬ್ದಾರಿ: ಪೊನ್ನಣ್ಣ

@nadubadewarthe; ಮಡಿಕೇರಿ ನ.14: ವಿರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಡಿಕೇರಿ ತಾಲ್ಲೂಕಿನ ಬಲ್ಲಮಾವಟಿ ಗ್ರಾ.ಪಂ.ಚಂಗೇಟಿರ ವೇದಿಕೆ ಸಭಾಂಗಣದಲ್ಲಿ ಶನಿವಾರ ನಡೆದ ಪ್ರಜಾಸೇವಾ ಅಭಿಯಾನದಲ್ಲಿ 80 ಕ್ಕೂ ಹೆಚ್ಚು ಅರ್ಜಿ ಸಲ್ಲಿಕೆಯಾದವು. ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ಹಾಗೂ ಶಾಸಕರಾದ ಎ.ಎಸ್.ಪೊನ್ನಣ್ಣ ಅವರ ಅಧ್ಯಕ್ಷತೆಯಲ್ಲಿ ನಡೆದ ಪ್ರಜಾಸೇವಾ ಆಂದೋಲನ ಸಂದರ್ಭದಲ್ಲಿ ಕಂದಾಯ, ಅರಣ್ಯ, ಪಂಚಾಯತ್ ರಾಜ್, ಸೆಸ್ಕ್, ಲೋಕೋಪಯೋಗಿ, ಸಣ್ಣ ನೀರಾವರಿ, ಕೆ ಎಸ್ ಆರ್ ಟಿಸಿ, ಕೃಷಿ ಮತ್ತಿತರ ಇಲಾಖೆ ಸಂಬಂಧ ಸಾರ್ವಜನಿಕರು ಹೆಚ್ಚು ಅರ್ಜಿಗಳು ಸಲ್ಲಿಸಿದರು. ಸಾರ್ವಜನಿಕರ ಅಹವಾಲು ಸ್ವೀಕರಿಸಿ ಮಾತನಾಡಿದ ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ಹಾಗೂ ಶಾಸಕರಾದ ಎ.ಎಸ್.ಪೊನ್ನಣ್ಣ ಅವರು ಸಾರ್ವಜನಿಕರಿಂದ ಸಲ್ಲಿಕೆ ಆಗಿರುವ ಶೇ 99 ಅರ್ಜಿಗಳಲ್ಲಿನ ಸಮಸ್ಯೆ ಬಗೆಹರಿಸಬಹುದಾಗಿದೆ ಎಂದರು. ಕಾಡಾನೆ ದಾಳಿಯಿಂದ ಉಂಟಾಗಿರುವ ಬೆಳೆಹಾನಿ ಪರಿಹಾರ, ಸಾಮಾಜಿಕ ಭದ್ರತಾ ಯೋಜನೆಯಡಿ ಪಿಂಚಣಿ ಸೌಲಭ್ಯ, ವಿದ್ಯುತ್ ಸಂಪರ್ಕ, ಬಸ್ ಸೌಲಭ್ಯ ಕಲ್ಪಿಸುವುದು, ಸೇತುವೆ ನಿರ್ಮಾಣ ಮತ್ತಿತರ ಮೂಲ ಸೌಲಭ್ಯಕ್ಕೆ ಹೆಚ್ಚಿನ ಅರ್ಜಿಗಳು ಸಲ್ಲಿಯಾಗಿದ್ದು, ಹಲವು ಮನವಿಗೆ ಸ್ಥಳದಲ್ಲಿಯೇ ಪರಿಹರಿಸಲಾಗಿದೆ ಎಂದರು.

ಜನಪ್ರತಿನಿಧಿಗಳ ಜತೆ ಅಧಿಕಾರಿಗಳು ಸಹ ಶ್ರದ್ಧೆಯಿಂದ ಕೆಲಸ ಮಾಡಿದ್ದಲ್ಲಿ, ಸಾರ್ವಜನಿಕರ ಮನವಿಗೆ ಸಕಾಲದಲ್ಲಿ ಸ್ಪಂದನೆ ದೊರೆಯಲಿದೆ. ಆ ದಿಸೆಯಲ್ಲಿ ಸಾರ್ಥಕತೆ ಸಿಗಬೇಕಾದರೆ ಆತ್ಮತೃಪ್ತಿ ಹಾಗೂ ಖುಷಿಯಿಂದ ಕಾರ್ಯ ನಿರ್ವಹಿಸಬೇಕು ಎಂದರು. ಜನರಿಗೆ ಬೇಕಿರುವುದು ಕನಿಷ್ಠ ಮೂಲ ಸೌಲಭ್ಯಗಳು, ಅವುಗಳನ್ನು ತಲುಪಿಸಿದರೆ, ಕೃತಜ್ಞತೆ ಸಲ್ಲಿಸುತ್ತಾರೆ. ಇದರಿಂದ ಸಾರ್ಥಕತೆ ದೊರೆಯಲಿದೆ ಎಂದು ಎ.ಎಸ್.ಪೊನ್ನಣ್ಣ ಅವರು ಒತ್ತಿ ಹೇಳಿದರು.

ಸಭೆ ಆರಂಭದಲ್ಲಿ ಮಾತನಾಡಿದ ಶಾಸಕರು ಸಾರ್ವಜನಿಕರು ಹಾಗೂ ಸರ್ಕಾರದ ನಡುವೆ ಸೇತುವೆಯಾಗಿ ಸರ್ಕಾರದ ಹಲವು ಸವಲತ್ತುಗಳನ್ನು ತಲುಪಿಸುವುದು ಹಾಗೂ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸುವಲ್ಲಿ 'ಪ್ರಜಾಸೇವಾ ಅಭಿಯಾನ' ಕಾರ್ಯಕ್ರಮ ಹಮ್ಮಿಕೊಂಡಿದ್ದು, ಇದರ ಉಪಯೋಗವನ್ನು ನಾಗರಿಕರು ಪಡೆದುಕೊಳ್ಳುವಂತಾಗಬೇಕು ಎಂದರು. ಸಾರ್ವಜನಿಕರ ನಿರೀಕ್ಷೆಗಳು ಸಾಕಷ್ಟು ಇವೆ, ಆ ದಿಸೆಯಲ್ಲಿ ಸಮಸ್ಯೆಗಳನ್ನು ಇತ್ಯರ್ಥ ಪಡಿಸಿಸುವುದು ಅತಿ ಮುಖ್ಯವಾಗಿದೆ ಎಂದು ಎ.ಎಸ್.ಪೊನ್ನಣ್ಣ ಅವರು ಪ್ರತಿಪಾದಿಸಿದರು.ತಾ.ಪಂ.ಇಒ ಶೇಖರ್ , ತಹಶೀಲ್ದಾರರಾದ ಶ್ರೀಧರ ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷರಾದ ಮಂದ್ರೀರ ಮೋಹನ್ ದಾಸ್, ಅಕ್ರಮ ಸಕ್ರಮ ಸಮಿತಿ ತಾಲ್ಲೂಕು ಅಧ್ಯಕ್ಷರಾದ ನೆರವಂಡ ಉಮೇಶ್, ಕಾವೇರಿ ಜಲಾನಯನ ಅಭಿವೃದ್ಧಿ ಮಂಡಳಿ ನಿರ್ದೇಶಕರಾದ ಸೂರಜ್ ಹೊಸೂರು, ಅಧಿಕಾರಿಗಳು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ನಡುಬಾಡೆ ಇ_ಪತ್ರಿಕೆ

ಕೊಡಗಿನ ಪ್ರಥಮ ದ್ವಿಭಾಷ ಸಂಜೆ ಇ-ದೈನಿಕ

ASDCA No; SCAB13122025/5632149 UDYAM-KR-18-0022072

ದಿನಾಂಕ: 14/11/26, ಶನಿವಾರ 8951073556 ನಾಳಂಕೆ: ತೊಲ್ಯಾರ್ -29, ಚೆನಿಯಾಚೆ

ಸಂಪಾದಕ: ಚಾಮೆರ ದಿನೇಶ್‌ಬೆಳ್ಯಪ್ಪ

www.nadubadenews.com nadubadenews@gmail.com @nadubadenews

ನಾಳೆಯ (14 ನವೆಂಬರ್, 2026) ದ್ವಾದಶ ರಾಶಿಗಳ ಭವಿಷ್ಯ

ಮೇಷ

ಕೆಲಸದ ಸ್ಥಳದಲ್ಲಿ ಕಠಿಣ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಲಿದೆ. ವ್ಯವಹಾರದಲ್ಲಿ ಹೊಸ ಉಪಕ್ರಮಗಳು ಗಮನಾರ್ಹ ಲಾಭ ತರಲಿವೆ. ಕುಟುಂಬದೊಂದಿಗೆ ಸಂತೋಷದ ಕ್ಷಣಗಳನ್ನು ಕಳೆಯುವಿರಿ.

ವೃಷಭ

ಅನಿರೀಕ್ಷಿತ ಆರ್ಥಿಕ ಲಾಭವಾಗುವ ಸೂಚನೆ ಇದೆ. ಆರೋಗ್ಯ ಸ್ಥಿರವಾಗಿ ಮತ್ತು ಉತ್ತಮವಾಗಿರಲಿದೆ. ಹಿರಿಯರ ಸಲಹೆ ಪ್ರಯೋಜನಕ್ಕೆ ಬರಲಿದೆ.

ಮಿಥುನ

ಬೌದ್ಧಿಕ ಪ್ರಯತ್ನಗಳಲ್ಲಿ ಯಶಸ್ಸು ಸಿಗಲಿದೆ. ಹೊಸ ಒಪ್ಪಂದಗಳು ವ್ಯವಹಾರವನ್ನು ಬಲಪಡಿಸುತ್ತವೆ. ಮಕ್ಕಳಿಂದ ಶುಭ ಸುದ್ದಿ ನಿರೀಕ್ಷಿಸಬಹುದು.

ಕರ್ಕಾಟಕ

- ಸಂಪತ್ತು ಕ್ರೋಢೀಕರಿಸುವ ಪ್ರಯತ್ನಗಳಲ್ಲಿ ಯಶಸ್ಸು ಸಿಗಲಿದೆ. ಮನಸ್ಸು ಉತ್ಸಾಹದಿಂದ ಕೂಡಿರುತ್ತದೆ. ಆರೋಗ್ಯದ ಕಡೆ ಸ್ವಲ್ಪ ಗಮನವಿರಲಿ.

ಸಿಂಹ

ಕೆಲಸದ ಸ್ಥಳದಲ್ಲಿ ತಾಳ್ಮೆ ಅತ್ಯಗತ್ಯ. ನಿಮ್ಮ ಸೃಜನಶೀಲತೆಗೆ ಮನ್ನಣೆ ಸಿಗಲಿದೆ. ಕುಟುಂಬದ ಹಳೆಯ ವಿವಾದಗಳು ಬಗೆಹರಿಯುವ ಸಾಧ್ಯತೆಯಿದೆ.

ಕನ್ಯಾ

- ಅನಗತ್ಯ ವೆಚ್ಚಗಳನ್ನು ನಿಯಂತ್ರಿಸುವುದರಿಂದ ಮನಸ್ಸಿಗೆ ನೆಮ್ಮದಿ ಸಿಗಲಿದೆ. ಆರೋಗ್ಯದ ಬಗ್ಗೆ ಕಾಳಜಿ ಇರಲಿ, ಅತಿಯಾದ ಆಯಾಸದಿಂದ ವಿಶ್ರಾಂತಿ ಪಡೆಯುವುದು ಒಳ್ಳೆಯದು.

ತುಲಾ

- ನಿಮ್ಮ ಹೊಸ ಕಾರ್ಯಶೈಲಿ ಕಚೇರಿಯಲ್ಲಿ ಮೆಚ್ಚುಗೆ ತರುತ್ತದೆ. ವ್ಯವಹಾರದಲ್ಲಿ ಹೊಸ ಯೋಜನೆಗಳು ಲಾಭದಾಯಕವಾಗಲಿವೆ. ಸ್ನೇಹಿತರೊಡನೆ ಬಾಂಧವ್ಯ ಗಟ್ಟಿಯಾಗಲಿದೆ.

ವೃಶ್ಚಿಕ

- ಆರೋಗ್ಯ ಅತ್ಯುತ್ತಮವಾಗಿರಲಿದೆ. ಆರ್ಥಿಕ ಪರಿಸ್ಥಿತಿ ಸುಧಾರಿಸಲು ಹೊಸ ಅವಕಾಶಗಳನ್ನು ಹುಡುಕುತ್ತೀರಿ. ಉತ್ಸಾಹದಿಂದ ಹೆಜ್ಜೆ ಇಡಿ.

ಧನು

ಕಾರ್ಯಸ್ಥಳದಲ್ಲಿ ನಿಮ್ಮ ಮಾತಿಗೆ ಹೆಚ್ಚಿನ ಮನ್ನಣೆ ಸಿಗಲಿದೆ. ವ್ಯವಹಾರದಲ್ಲಿ ಹೊಸ ಗ್ರಾಹಕರು ದೊರೆತು ಮಾರಾಟ ಹೆಚ್ಚಾಗಲಿದೆ. ಶುಭ ಕಾರ್ಯಗಳಲ್ಲಿ ಭಾಗಿ.

ಮಕರ

- ಮಾನಸಿಕ ಶಾಂತಿ ಮತ್ತು ಉತ್ತಮ ಆರೋಗ್ಯವನ್ನು ಅನುಭವಿಸುವಿರಿ. ಬಾಕಿ ಉಳಿದಿರುವ ಕೆಲಸಗಳು ಸುಲಭವಾಗಿ ಪೂರ್ಣಗೊಳ್ಳಲಿವೆ.

ಕುಂಭ

- ಆರ್ಥಿಕ ಲಾಭಕ್ಕಾಗಿ ಹಲವು ಮಾರ್ಗಗಳು ತೆರೆದುಕೊಳ್ಳಲಿವೆ. ಹಿಂದೆ ಮಾಡಿದ ತಪ್ಪುಗಳಿಂದ ಪಾಠ ಕಲಿತು ಮುನ್ನಡೆಯಿರಿ. ಸ್ನೇಹಿತರ ಸಹಕಾರ ಸಿಗಲಿದೆ.

ಮೀನ

- ವಿದ್ಯಾರ್ಥಿಗಳಿಗೆ ಹೊಸ ದಾರಿಗಳು ಗೋಚರಿಸಲಿವೆ. ಇಷ್ಟಾರ್ಥ ಸಿದ್ಧಿಗಾಗಿ ದೇವರ ಮೊರೆ ಹೋಗುವಿರಿ. ಹಿಂದೆ ಮಾಡಿದ ಹೂಡಿಕೆಗಳು ಫಲ ನೀಡುತ್ತವೆ.

(ಗಮನಿಸಿ: ರಾಶಿ ಭವಿಷ್ಯವು ಸಾಮಾನ್ಯ ಗ್ರಹಚಾರವನ್ನು ಆಧರಿಸಿದ್ದು, ವೈಯಕ್ತಿಕ ಜಾತಕಕ್ಕೆ ಅನುಗುಣವಾಗಿ ಸ್ವಲ್ಪ ಬದಲಾವಣೆಗಳಿರಬಹುದು.)

ಚೆಟ್ಟಳ್ಳಿ ಸಹಕಾರ ಸಂಘದ ಸುವರ್ಣ ಮಹೋತ್ಸವ ಲೋಗೊ ಬಿಡುಗಡೆ

ಮುಂದಿನ ಒಂದು ವರ್ಷ ವಿವಿಧ ಕಾರ್ಯಕ್ರಮಗಳ ಆಯೋಜನೆ



ಪುತ್ತರಿರ ಕರುಣ್ ಕಾಳಯ್ಯ

@nadubadewarthe; ನ.14:- ಚೆಟ್ಟಳ್ಳಿ: ಚೆಟ್ಟಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು 50ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಹಿನ್ನೆಲೆಯಲ್ಲಿ ಸುವರ್ಣ ಮಹೋತ್ಸವದ ಸಂಭ್ರಮಕ್ಕೆ ಅಧಿಕೃತವಾಗಿ ಚಾಲನೆ ನೀಡಲಾಯಿತು. 73ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ಸಂಘದ ಆವರಣದಲ್ಲಿ ಸಹಕಾರ ಧ್ವಜಾರೋಹಣ ನೆರವೇರಿಸಿ, ಸುವರ್ಣ ಮಹೋತ್ಸವದ ವಿಶೇಷ ಲೋಗೊವನ್ನು ಬಿಡುಗಡೆಗೊಳಿಸಲಾಯಿತು.

ಸಹಕಾರ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಸಂಘದ ಅಧ್ಯಕ್ಷ ಬಲ್ಲಾರಂಡ ಮಣಿ ಉತ್ತಪ್ಪ, ದೇಶಾದ್ಯಂತ ನವೆಂಬರ್ 14ರಿಂದ ಸಹಕಾರ ಸಪ್ತಾಹ ಆಚರಿಸಲಾಗುತ್ತಿದ್ದು, ಇದರ ಅಂಗವಾಗಿ ಚೆಟ್ಟಳ್ಳಿ ಸಹಕಾರ ಸಂಘದಲ್ಲಿಯೂ ಸಪ್ತಾಹಕ್ಕೆ ಚಾಲನೆ ನೀಡಲಾಗಿದೆ ಎಂದರು.

ಇಂದಿನ ತಂತ್ರಜ್ಞಾನ ಯುಗದಲ್ಲಿ ಖಾಸಗಿ ಬ್ಯಾಂಕುಗಳ ಪೈಪೋಟಿಯ ನಡುವೆಯೂ ಸರಕಾರದ ಯಾವುದೇ ಅನುದಾನದ ನೆರವಿಲ್ಲದೆ, ರೈತರ ಹಾಗೂ ಸದಸ್ಯರ ಹಣಕಾಸಿನ ಸಹಕಾರದಿಂದಲೇ ಸಹಕಾರ ಸಂಘಗಳು ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿವೆ. ಖಾಸಗಿ ಬ್ಯಾಂಕುಗಳಿಗೆ ಸೆಡ್ಡು ಹೊಡೆದು ಸಹಕಾರ ಕ್ಷೇತ್ರ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಸದಸ್ಯರೆಲ್ಲರೂ ಒಗ್ಗಟ್ಟಿನಿಂದ ಕೈಜೋಡಿಸುವ ಮೂಲಕ ಸಂಘವನ್ನು ಇನ್ನಷ್ಟು ಬಲಿಷ್ಠಗೊಳಿಸಬೇಕೆಂದು ಕರೆ ನೀಡಿದರು.

ಚೆಟ್ಟಳ್ಳಿ ಸಹಕಾರ ಸಂಘವು 50 ವರ್ಷಗಳ ಸಾರ್ಥಕ ಸೇವೆಯ ಮೈಲಿಗಲ್ಲು ತಲುಪುತ್ತಿರುವ ಹಿನ್ನೆಲೆಯಲ್ಲಿ ಸುವರ್ಣ ಮಹೋತ್ಸವದ ಲೋಗೊ ಬಿಡುಗಡೆ ಮಾಡುವ ಮೂಲಕ ಸಂಭ್ರಮಾಚರಣೆಗೆ ಚಾಲನೆ ನೀಡಲಾಗಿದೆ. ಮುಂದಿನ ಒಂದು ವರ್ಷದ ಅವಧಿಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಸಮಾರೋಪ ಸಮಾರಂಭದಲ್ಲಿ ಸಂಘದ ಹಿರಿಯ ಸದಸ್ಯರ ಕುಟುಂಬದ ಹಿರಿಯರನ್ನು ಗೌರವಿಸುವ ಕಾರ್ಯಕ್ರಮವೂ ನಡೆಯಲಿದೆ ಎಂದು ತಿಳಿಸಿದರು.

ಸುವರ್ಣ ಮಹೋತ್ಸವ ಸಮಿತಿ ರಚನೆ: ಸಂಘದ ಸುವರ್ಣ ಮಹೋತ್ಸವ ಕಾರ್ಯಕ್ರಮಗಳ ಆಯೋಜನೆ ಹಾಗೂ ರೂಪುರೇಷೆ ಸಿದ್ಧಪಡಿಸುವ ಉದ್ದೇಶದಿಂದ ಸಂಘದ ಮಾಜಿ ಉಪಾಧ್ಯಕ್ಷರಾದ ಎಚ್.ಎಸ್. ತಿಮ್ಮಪ್ಪಯ್ಯ, ಕಣಜಾಲು ಪೂವಯ್ಯ, ಪತ್ರಕರ್ತ ಪುತ್ತರಿರ ಕರುಣ್ ಕಾಳಯ್ಯ, ಮಾಜಿ ನಿರ್ದೇಶಕರಾದ ಪುತ್ತರಿರ ಸೀತಮ್ಮ ಮೊಣ್ಣಪ್ಪ ಹಾಗೂ ನೂಜಿಬೈಲು ನಾಣಯ್ಯ ಅವರನ್ನು ಸುವರ್ಣ ಮಹೋತ್ಸವ ಸಮಿತಿಗೆ ಆಯ್ಕೆ ಮಾಡಲಾಯಿತು. ಮುಂದಿನ ಕಾರ್ಯಕ್ರಮಗಳ ಆಯೋಜನೆ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ಪೇರಿಯನ ಎಸ್. ಪೂರ್ಣಚ್ಚ, ನಿರ್ದೇಶಕರಾದ ಕೊಂಗೇಟಿರ ವಾಣಿ ಕಾಳಪ್ಪ, ಅಕ್ಕಾರಿ ದಯಾನಂದ, ಬಟ್ಟೀರ ವೇಣುಗೋಪಾಲ್ (ಶರಿನ್), ಮುಳ್ಳಂಡ ಮಾಯಮ್ಮ ತಮ್ಮಯ್ಯ, ಕರ್ನಯ್ಯನ ಪ್ರಜ್ವಲ್, ಕಾಶಿ ಬಿ.ಎಂ., ಮರದಾಳು ಚೇತನ್, ಗಣೇಶ್ ಪಿ.ಟಿ., ರವಿ ಜೆ.ಆರ್., ಪರಿಣತ ನಿರ್ದೇಶಕರಾದ ಮುಕ್ಕಾಟಿ ಪಳಂಗಪ್ಪ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ನಂದಿನಿ ಕೆ.ಎಸ್. ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸ್ವಾಗತಿಸಿ, ಅಧ್ಯಕ್ಷ ಬಲ್ಲಾರಂಡ ಮಣಿ ಉತ್ತಪ್ಪ ವಂದಿಸಿದರು.

ಘುತ ಕಾಲದಲ್ಲಿ ಈ ದಿನ... 14 ನವೆಂಬರ್ 2026

⭐ ಜವಾಹರಲಾಲ್ ನೆಹರು ಜನನ (1889). ಸ್ವತಂತ್ರ ಭಾರತದ ಮೊದಲ ಪ್ರಧಾನಮಂತ್ರಿ ಪಂಡಿತ್ ಜವಾಹರಲಾಲ್ ನೆಹರು ಅವರು ಅಲಹಾಬಾದ್‌ನಲ್ಲಿ ಜನಿಸಿದರು. ಮಕ್ಕಳ ಮೇಲಿನ ಅವರ ಪ್ರೀತಿಯ ಗೌರವಾರ್ಥವಾಗಿ 1964ರ ನಂತರ ಪ್ರತಿ ವರ್ಷ ಈ ದಿನವನ್ನು ಭಾರತದಲ್ಲಿ ಮಕ್ಕಳ ದಿನಾಚರಣೆ (ಬಾಲ ದಿವಸ) ಎಂದು ಆಚರಿಸಲಾಗುತ್ತದೆ.

⭐ ಸಿ .ಕೆ. ನಾಯುಡು ನಿಧನ (1967). ⭐ ಭಾರತೀಯ ಕ್ರಿಕೆಟ್ ತಂಡದ ಮೊದಲ ಟೆಸ್ಟ್ ನಾಯಕ ಕೊಟ್ಟಾರಿ ಕನಕಯ್ಯ ನಾಯುಡು (C.K. Nayudu) ಅವರು ಈ ದಿನ ನಿಧನರಾದರು

⭐ ವಿಕ್ರಮ್ ಗೋಖಲೆ ಜನನ (1945). ಖ್ಯಾತ ಭಾರತೀಯ ರಂಗಭೂಮಿ ಮತ್ತು ಚಲನಚಿತ್ರ ನಟ ವಿಕ್ರಮ್ ಗೋಖಲೆ ಅವರು ಪುಣೆಯಲ್ಲಿ ಜನಿಸಿದರು.

⭐ ಹೆಲಿಕಾಪ್ಟರ್ ದುರಂತ (1997). ಕೇಂದ್ರ ರಕ್ಷಣಾ ಖಾತೆ ರಾಜ್ಯ ಸಚಿವ ಎನ್.ವಿ.ಎನ್. ಸೋಮು ಅವರು ಅರುಣಾಚಲ ಪ್ರದೇಶದ ತೇಜ್‌ಪುರದಲ್ಲಿ ನಡೆದ ಸೇನಾ ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟರು.

⭐ ಮೊಬಿ-ಡಿಕ್ ಪ್ರಕಟಣೆ (1851). ಅಮೆರಿಕದ ಲೇಖಕ ಹರ್ಮನ್ ಮೆಲ್ವಿಲ್ಲೆ ಅವರ ವಿಶ್ವಪ್ರಸಿದ್ಧ ಕಾದಂಬರಿ 'ಮೊಬಿ-ಡಿಕ್' (Moby-Dick) ನ್ಯೂಯಾರ್ಕ್‌ನಲ್ಲಿ ಪ್ರಕಟವಾಯಿತು.

⭐ ರೇಡಿಯೋ ಪ್ರಸಾರ ಆರಂಭ (1922) ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಂಪನಿ (BBC) ಯುನೈಟೆಡ್ ಕಿಂಗ್‌ಡಮ್‌ನಲ್ಲಿ ತನ್ನ ದೈನಂದಿನ ರೇಡಿಯೋ ಸೇವೆಯನ್ನು ಅಧಿಕೃತವಾಗಿ ಪ್ರಾರಂಭಿಸಿತು.

⭐ ಬ್ರಿಟನ್ ದೊರೆ ಮೂರನೇ ಚಾರ್ಲ್ಸ್ ಜನನ (1948). ರಾಣಿ ಎಲಿಜಬೆತ್ II ಮತ್ತು ಪ್ರಿನ್ಸ್ ಫಿಲಿಪ್ ಅವರ ಹಿರಿಯ ಪುತ್ರನಾಗಿ ಪ್ರಿನ್ಸ್ ಚಾರ್ಲ್ಸ್ (ಪ್ರಸ್ತುತ ಕಿಂಗ್ ಚಾರ್ಲ್ಸ್ III) ಲಂಡನ್‌ನ ಬಕಿಂಗ್‌ಹ್ಯಾಮ್ ಅರಮನೆಯಲ್ಲಿ ಜನಿಸಿದರು

⭐ ಅಪೊಲೊ 12 ಉಡಾವಣೆ (1969). ನಾಸಾ (NASA) ಚಂದ್ರನ ಮೇಲೆ ಮಾನವನನ್ನು ಇಳಿಸುವ ತನ್ನ ಎರಡನೇ ಮಿಷನ್ ಆದ ಅಪೊಲೊ 12 ಅನ್ನು ಉಡಾವಣೆ ಮಾಡಿತು

⭐ ಮಂಗಳ ಗ್ರಹದ ಕಕ್ಷೆಗೆ ಮ್ಯಾರಿನರ್ 9 (1971). ನಾಸಾದ ಮ್ಯಾರಿನರ್ 9 ಬಾಹ್ಯಾಕಾಶ ನೌಕೆಯು ಮಂಗಳ ಗ್ರಹದ ಕಕ್ಷೆಯನ್ನು ಪ್ರವೇಶಿಸುವ ಮೂಲಕ ಬೇರೊಂದು ಗ್ರಹವನ್ನು ಸುತ್ತಿದ ಮೊದಲ ಬಾಹ್ಯಾಕಾಶ ನೌಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

⭐ ವಿಶ್ವ ಮಧುಮೇಹ ದಿನ (World Diabetes Day). ಮಧುಮೇಹದ ಬಗ್ಗೆ ಜಾಗೃತಿ ಮೂಡಿಸಲು ಪ್ರತಿ ವರ್ಷ ನವೆಂಬರ್ 14 ರಂದು ವಿಶ್ವ ಮಧುಮೇಹ ದಿನವನ್ನು ಆಚರಿಸಲಾಗುತ್ತದೆ.

⭐ ಆಸ್ಟ್ರೇಲಿಯಾಕ್ಕೆ ಚೊಚ್ಚಲ ಟಿ20 ವಿಶ್ವಕಪ್ (2021). ದುಬೈನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು 8 ವಿಕೆಟ್‌ಗಳಿಂದ ಮಣಿಸಿದ ಆಸ್ಟ್ರೇಲಿಯಾ ತನ್ನ ಮೊದಲ ಐಸಿಸಿ ಪುರುಷರ ಟಿ20 ವಿಶ್ವಕಪ್ ಟ್ರೋಫಿಯನ್ನು ಗೆದ್ದುಕೊಂಡಿತು.

⭐ ದಕ್ಷಿಣ ಆಫ್ರಿಕಾದ ಐತಿಹಾಸಿಕ ಗೆಲುವು (1991). 21 ವರ್ಷಗಳ ನಿಷೇಧದ ನಂತರ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಮರಳಿದ ದಕ್ಷಿಣ ಆಫ್ರಿಕಾ, ನವದೆಹಲಿಯಲ್ಲಿ ಭಾರತವನ್ನು ಸೋಲಿಸುವ ಮೂಲಕ ತನ್ನ ಮೊದಲ ಏಕದಿನ ಗೆಲುವನ್ನು ದಾಖಲಿಸಿತು

⭐ ಆಡಮ್ ಗಿಲ್‌ಕ್ರಿಸ್ಟ್ ಜನನ (1971). ಕ್ರಿಕೆಟ್ ಇತಿಹಾಸದ ಶ್ರೇಷ್ಠ ವಿಕೆಟ್ ಕೀಪರ್-ಬ್ಯಾಟ್ಸ್‌ಮನ್‌ಗಳಲ್ಲಿ ಒಬ್ಬರಾದ ಆಸ್ಟ್ರೇಲಿಯಾದ ಆಡಮ್ ಗಿಲ್‌ಕ್ರಿಸ್ಟ್ ಜನಿಸಿದರು.

⭐ ಸೆಬಾಸ್ಟಿಯನ್ ವೆಟ್ಟೆಲ್ ವಿಶ್ವ ದಾಖಲೆ (2010). ಜರ್ಮನಿಯ ಫಾರ್ಮುಲಾ ಒನ್ ಚಾಲಕ ಸೆಬಾಸ್ಟಿಯನ್ ವೆಟ್ಟೆಲ್ ತಮ್ಮ 23ನೇ ವಯಸ್ಸಿನಲ್ಲಿ ಅತ್ಯಂತ ಕಿರಿಯ F1 ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿದರು.

⭐ ಮುಹಮ್ಮದ್ ಅಲಿ ಬಾಕ್ಸಿಂಗ್ ಗೆಲುವು (1966). ಹೂಸ್ಟನ್‌ನಲ್ಲಿ ನಡೆದ ಪಂದ್ಯದಲ್ಲಿ ಕ್ಲೀವ್‌ಲ್ಯಾಂಡ್ ವಿಲಿಯಮ್ಸ್ ಅವರನ್ನು ಮೂರನೇ ಸುತ್ತಿನಲ್ಲಿ ನಾಕೌಟ್ ಮಾಡುವ ಮೂಲಕ ಮುಹಮ್ಮದ್ ಅಲಿ ತಮ್ಮ ವಿಶ್ವ ಹೆವಿವೇಯ್ಟ್ ಪ್ರಶಸ್ತಿಯನ್ನು ಉಳಿಸಿಕೊಂಡರು.



ಸಂಗ್ರಹ;
ಕರಿನೆರವಂಡ ಡ್ಯಾನಿ ಕುಶಾಲಪ್ಪ

ರೈಟರ್ ಬೇಕಾಗಿದ್ದಾರೆ

ಕೊಳತೋಡ್-ಬೈಗೋಡು ಗ್ರಾಮದ ಕಾಫಿ ತೋಟಕ್ಕೆ ರೈಟರ್ ಬೇಕಾಗಿದ್ದಾರೆ.
ಆಸಕ್ತರು; 9448005671 / 94493093 ಸಂಖ್ಯೆಯನ್ನು ಸಂಪರ್ಕಿಸಬಹುದು

ಉದ್ಯೋಗ ಮಾಹಿತಿ...

1. ಕರ್ನಾಟಕ ಲೋಕ ಸೇವಾ ಆಯೋಗ (KPSC - ಗೆಜೆಟೆಡ್ ಪ್ರೊಬೇಷನರ್ಸ್ KAS)
 * ವಿವರ: 319 ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳ (ತಹಶೀಲ್ದಾರ್, ಉಪವಿಭಾಗಾಧಿಕಾರಿ, ವಾಣಿಜ್ಯ ತೆರಿಗೆ ಅಧಿಕಾರಿ ಇತ್ಯಾದಿ) ಪ್ರಿಲಿಮ್ಸ್ ಪರೀಕ್ಷೆಯು ಬರುವ ನವೆಂಬರ್ 15, 2026 (ಭಾನುವಾರ) ರಂದು ಅತ್ಯಂತ ಹತ್ತಿರದಲ್ಲಿದೆ. ಅಭ್ಯರ್ಥಿಗಳು ಈಗಾಗಲೇ ಡೌನ್‌ಲೋಡ್ ಮಾಡಿಕೊಂಡಿರುವ ಪ್ರವೇಶ ಪತ್ರ (Admit Card) ಹಾಗೂ ಅಧಿಕೃತ ಗುರುತಿನ ಚೀಟಿಯೊಂದಿಗೆ ಪರೀಕ್ಷಾ ಕೇಂದ್ರಕ್ಕೆ ತೆರಳಲು ಸಿದ್ಧರಾಗಿರಿ. ಕೊನೆಯ ಕ್ಷಣದ ತಯಾರಿ ಚುರುಕುಗೊಳಿಸಿ!
 * ಅಧಿಕೃತ ವೆಬ್‌ಸೈಟ್: https://kpsc.kar.nic.in

2. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA - FDA & SDA ಬೃಹತ್ ನೇಮಕಾತಿ)
 * ಹುದ್ದೆಗಳ ವಿವರ: ಪ್ರಥಮ ದರ್ಜೆ ಸಹಾಯಕರ (FDA), ದ್ವಿತೀಯ ದರ್ಜೆ ಸಹಾಯಕರ (SDA), ಅಕೌಂಟ್ಸ್ ಅಸಿಸ್ಟೆಂಟ್ ಹಾಗೂ ವಾರ್ಡನ್ ಹುದ್ದೆಗಳು.
 * ಖಾಲಿ ಹುದ್ದೆಗಳು: ಒಟ್ಟು 5,431 ಹುದ್ದೆಗಳು (ಉಳಿಕೆ ಮೂಲ ವೃಂದ ಹಾಗೂ ಕಲ್ಯಾಣ ಕರ್ನಾಟಕ ವಲಯ).
 * ವಿದ್ಯಾರ್ಹತೆ: 2ನೇ ಪಿಯುಸಿ (PUC) ಅಥವಾ ಯಾವುದೇ ಮಾನ್ಯತೆ ಪಡೆದ ಪದವಿ (Degree).
 * ಸಂಬಳ: ಸರ್ಕಾರದ ವೇತನ ಶ್ರೇಣಿಯಂತೆ ರೂ. 34,100 ರಿಂದ ರೂ. 92,500+ ವರೆಗೆ.
 * ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25 ನವೆಂಬರ್ 2026 (ಶುಲ್ಕ ಪಾವತಿಗೆ 26 ನವೆಂಬರ್ 2026).
 * ಅಧಿಕೃತ ವೆಬ್‌ಸೈಟ್: https://cetonline.karnataka.gov.in

3. ಇಂಡಿಯನ್ ಬ್ಯಾಂಕ್ (Indian Bank Apprentice Recruitment 2026)
 * ಹುದ್ದೆಗಳ ವಿವರ: ಗ್ರಾಹಕ ಸೇವಾ ಅಪ್ರೆಂಟಿಸ್ (Apprentice) ಹುದ್ದೆಗಳು (ಕರ್ನಾಟಕ ವಲಯ ಸೇರಿದಂತೆ ಅಖಿಲ ಭಾರತ ಮಟ್ಟದಲ್ಲಿ).
 * ಖಾಲಿ ಹುದ್ದೆಗಳು: 1,500 ಹುದ್ದೆಗಳು.
 * ವಿದ್ಯಾರ್ಹತೆ: ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಪದವಿ (Degree).
 * ಸಂಬಳ: ಮಾಸಿಕ ಸ್ಟೈಫಂಡ್ ರೂ. 15,000 (1 ವರ್ಷದ ಅವಧಿಗೆ). ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25 ನವೆಂಬರ್ 2026.
 * * ಅಧಿಕೃತ ವೆಬ್‌ಸೈಟ್: https://www.indianbank.in

4. ಕರ್ನಾಟಕ ಪರೀಕ್ಷಾ ಪ್ರಾಧಿಕಾರ
 * ಹುದ್ದೆಗಳ ವಿವರ: ಅಸಿಸ್ಟೆಂಟ್ ಟೌನ್ ಪ್ಲಾನರ್, ಕಿರಿಯ ಇಂಜಿನಿಯರ್ (Junior) ಹಾಗೂ ಡ್ರಾಫ್ಟ್ಸ್‌ಮನ್ ಹುದ್ದೆಗಳು.
 * ಖಾಲಿ ಹುದ್ದೆಗಳು: 218 ಹುದ್ದೆಗಳು (RPC ಮತ್ತು ಕಲ್ಯಾಣ ಕರ್ನಾಟಕ).
 * ವಿದ್ಯಾರ್ಹತೆ: ಸಿವಿಲ್ ಇಂಜಿನಿಯರಿಂಗ್ ಅಥವಾ ಸಂಬಂಧಿತ ಟ್ರೇಡ್‌ನಲ್ಲಿ ಡಿಪ್ಲೊಮಾ (Diploma).
 * ಸಂಬಳ: ರೂ. 54,175 ರಿಂದ ರೂ. 99,400 ರವರೆಗೆ (ಮಾಸಿಕ).
 * ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 26 ನವೆಂಬರ್ 2026.
 * ಅಧಿಕೃತ ವೆಬ್‌ಸೈಟ್: https://cetonline.karnataka.gov.in/kea

5. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA - Female Supervisor Recruitment)
 * ಹುದ್ದೆಗಳ ವಿವರ: ಮಹಿಳಾ ಮೇಲ್ವಿಚಾರಕಿ ಹುದ್ದೆಗಳು.
 * ಖಾಲಿ ಹುದ್ದೆಗಳು: 141 ಹುದ್ದೆಗಳು.
 * ವಿದ್ಯಾರ್ಹತೆ: ಸಂಬಂಧಿತ ವಿಷಯದಲ್ಲಿ ಪದವಿ ಅಥವಾ ಸರ್ಕಾರದ ನಿಯಮಾನುಸಾರ ವಿದ್ಯಾರ್ಹತೆ.
 * ಸಂಬಳ: ಸರ್ಕಾರದ ವೇತನ ಶ್ರೇಣಿಯಂತೆ ಆಕರ್ಷಕ ವೇತನ ಹಾಗೂ ಭತ್ಯೆಗಳು.
 * ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 28 ನವೆಂಬರ್ 2026.
 * ಅಧಿಕೃತ ವೆಬ್‌ಸೈಟ್: https://cetonline.karnataka.gov.in

ಕೊಡಗು ಜಿಲ್ಲೆಯ ವಿಶೇಷ ಹವಾಮಾನ ವರದಿ...

ನಾಳೆಯು ಚಳಿ ಹೆಚ್ಚಿರಲಿದೆ...

- ಹಗಲಿನ ವಾತಾವರಣ: ನಾಳೆ (ಭಾನುವಾರ) ಜಿಲ್ಲೆಯಲ್ಲಿ ಭಾಗಶಃ ಮೋಡ ಕವಿದ ಹಾಗೂ ಆಹ್ಲಾದಕರ ವಾತಾವರಣವಿರಲಿದ್ದು, ಗರಿಷ್ಠ ತಾಪಮಾನವು 26°C ತಲುಪಲಿದೆ. ವಾತಾವರಣದಲ್ಲಿ ತೇವಾಂಶವು ಶೇಕಡಾ 72% ರಷ್ಟಿರಲಿದ್ದು, ಯುವಿ (UV) ಸೂಚ್ಯಂಕವು 6 ರಷ್ಟಿರಲಿದೆ.
- ಮಳೆಯ ಮುನ್ಸೂಚನೆ: ಹಗಲಿನಲ್ಲಿ ಮಳೆಯಾಗುವ ಸಂಭವವು ಅತ್ಯಂತ ಕಡಿಮೆ ಇದ್ದು (ಶೇಕಡಾ 10% ರಷ್ಟು ಮಾತ್ರ), ರಾತ್ರಿಯ ಸಮಯದಲ್ಲಿಯೂ ಮಳೆಯ ಸಾಧ್ಯತೆ ಶೇಕಡಾ 15% ಇರಲಿದೆ. ಜಿಲ್ಲೆಯ ಕೆಲವು ಭಾಗಗಳಲ್ಲಿ ಮುಂಜಾನೆ ಮಂಜು ಕವಿದ ವಾತಾವರಣ ಕಂಡುಬರಬಹುದು.
- ರಾತ್ರಿಯ ವಾತಾವರಣ: ರಾತ್ರಿ ವೇಳೆಯು ತಂಪಾದ ಗಾಳಿಯೊಂದಿಗೆ ಮೋಡ ಕವಿದ ವಾತಾವರಣ ಮುಂದುವರಿಯಲಿದ್ದು, ಕನಿಷ್ಠ ತಾಪಮಾನವು 18°C ವರೆಗೆ ಕುಸಿಯಲಿದೆ.
- ಗಾಳಿಯ ದಿಕ್ಕು ಮತ್ತು ವೇಗ: ಗಾಳಿಯು ಪೂರ್ವ-ಈಶಾನ್ಯ ದಿಕ್ಕಿನಿಂದ ಗಂಟೆಗೆ ಸುಮಾರು 10 ಮೈಲಿ (ಸುಮಾರು 16 ಕಿ.ಮೀ) ವೇಗದಲ್ಲಿ ಬೀಸಲಿದೆ.